# ಗಾಜಿನ ಕ್ರಿಸ್‌ಮಸ್ ಟ್ರೀ



ಬಣ್ಣ ಬಣ್ಣದ ಗಾಜಿನ ಕೊಳವೆಗಳಿಂದ ಮಾಡಿರುವ ಅತ್ಯಂತ ವಿಶಿಷ್ಟವಾಗಿರುವ ಕ್ರಿಸ್‌ಮಸ್ ಮರವೊಂದು ಇಟಲಿಯ ವೆನಿಸ್ ಬಳಿಯ ಮುರಾನೋ ದ್ವೀಪದಲ್ಲಿದೆ. 13ನೇ ಶತಮಾನದಿಂದಲೂ ಲೋಟ, ತಟ್ಟೆ ಹೂದಾನಿ, ಗೊಂಚಲು ದೀಪ, ಅಲಂಕಾರಿಕ ವಸ್ತು ಮುಂತಾದ ಕಲಾತ್ಮಕ ಗಾಜಿನ ವಸ್ತುಗಳನ್ನು ಕೈಯಿಂದಲೇ ತಯಾರಿಸುವಲ್ಲಿ ವೆನಿಸ್ ಜನರು ಬಹಳ ಹೆಸರುವಾಸಿ. ಅಂತೆಯೇ ಊದಿರುವ ಗಾಜು ಕೊಳವೆಯಿಂದ ಮಾಡಿರುವ ಈ ಕ್ರಿಸ್‌ಮಸ್ ಮರವು ವೆನಿಸ್ ಜನರ ಕಲಾ ನೈಪುಣ್ಯಕ್ಕೆ ಸಾಕ್ಷಿಯಾಗಿರುವ ಕೈಗನ್ನಡಿಯಾಗಿದೆ.

ಬರೋಬ್ಬರಿ 8.5 ಮೀಟರ್ ಉದ್ದ, 3 ಮೀಟರ್ ಸುತ್ತಳತೆ ಹಾಗೂ 3 ಟನ್ ತೂಕವಿರುವ ಈ ಕ್ರಿಸ್‌ಮಸ್ ಮರ ಸೇಂಟ್ ಮಾರ್ಕ್ಸ್ ಚೌಕದಲ್ಲಿದೆ. ಇದರಲ್ಲಿ 1000 ಗಾಜಿನ ಕೊಳವೆಗಳಿವೆ ಹಾಗೂ 2000 ಲೋಹದ ರಾಡ್‌ಗಳಿವೆ. ಪುರಾತನ ಹಾಗೂ ನಾವೀನ್ಯ ಕಲೆಗಳೆರಡನ್ನೂ ಮೈಗೂಡಿಸಿಕೊಂಡ ಮನಮೋಹಕ ಮುರಾನೋ ಗ್ಲಾಸ್ ಮರವು ಜಗತ್ತಿನಲ್ಲೇ ಅತ್ಯಂತ ಎತ್ತರದ ಕ್ರಿಸ್‌ಮಸ್ ಗ್ಲಾಸ್ ಟ್ರೀ ಎಂದೇ ಹೆಸರು ಗಳಿಸಿದೆ.

■ ವಿದ್ಯಾ ವಿ ಹಾಲಭಾವಿ

